O.S. No. 222-2013
D.W. - 2

**ದಿನಾಂಕಃ 09-06-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

***ಪಾಟೀ ಸವಾಲುಃ- ಶ್ರೀ ಬಿ ಎಸ್., ಮಾನ್ಯ ವಕೀಲರಿಂದ ವಾದಿ ಪರವಾಗಿಃ-***

ನನ್ನ ಮದುವೆ ನಂತರ ನನ್ನ ಮತ್ತು ನನ್ನ ತಾಯಿ ಮನೆಯವರ ಜೊತೆ ಸಂಬಂಧ ಚೆನ್ನಾಗಿತ್ತು. ಪ್ರಸ್ತುತ ದಾವೆಯು ಎರಡು ಆಸ್ತಿಗಳ ಬಗ್ಗೆ ನಡೆದಿದೆ ಎಂದರೆ ಸರಿ. ನನ್ನ ತಾಯಿ ಮೊದಲನೆ ಮಳಿಗೆಯಿಂದ ಬಂದ ಬಾಡಿಗೆ ಹಣವನ್ನು ಉಳಿತಾಯ ಮಾಡಿ ಮತ್ತು ನನ್ನ ದೊಡ್ಡ ಅಣ್ಣ ವಾದಿ ಕೊಟ್ಟಂತಹ ಹಣವನ್ನು ಕೂಡಿಸಿ ಖರೀದಿಸಿದ ಆಸ್ತಿ ಆಗಿರುತ್ತದೆ. ಎರಡು ದಾವ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ.

ಮೃತ 2 ನೇ ಪ್ರತಿವಾದಿ ನನ್ನ ತಾಯಿಯನ್ನು ಹೆದರಿಸಿ ಅವರಿಗೆ ಯಾವಾಗಲೂ ತೊಂದರೆ ಕೊಡುತ್ತಿದ್ದ. ಮೃತ 2 ನೇ ಪ್ರತಿವಾದಿಯ ಮದುವೆಯಾಗಿದ್ದು ಆತ ಕೊಡುವ ತೊಂದರೆಯಿಂದ ಆತನ ಹೆಂಡತಿ ಅತನ್ನನ್ನು ತೊರೆದು ಹೊರಟು ಹೊಗಿದ್ದಳು. ಆಕೆಗೆ ಒಟ್ಟು 3 ಜನಮಕ್ಕಳಿಂದ 3 ಮಕ್ಕಳನ್ನು ಬಿಟ್ಟು ಹೊರಟು ಹೊಗಿದ್ದಳು. 3 ಮಕ್ಕಳನ್ನು ನನ್ನ ತಾಯಿ ಸಾಕಿಸಲುಹಿರುತ್ತಾಳೆ. 2 ನೇ ಪ್ರತಿವಾದಿ ಸುಮಾರು ದಿನಗಳ ಹಿಂದೆ ನಮ್ಮ ತಾಯಿ ಮತ್ತು 3 ಜನ ಮಕ್ಕಳನ್ನು ಬಿಟ್ಟು ಪೂನಾಕ್ಕೆ ಹೋಗಿ ಸೇರಿಕೊಂಡಿದ್ದ. ನಂತರ ವಾದಿ ಹೋಗಿ ಆತನನ್ನು ಸಮಾಧಾನ ಮಾಡಿ ಕರೆತಂದಿರುತ್ತಾರೆ. ಅಲ್ಲಿಂದ ಬಂದ ನಂತರವು ಸಹ ಆತ ನನ್ನ ತಾಯಿಗೆ ತೊಂದರೆ ಕೊಡುತ್ತಿದ್ದ. ನನ್ನ ತಾಯಿಯನ್ನು ಭೇಟಿಯಾಗಲು ನಾನು ಆಗಾಗ ಬರುತ್ತಿದ್ದೆ. ಆ ಸಮಯದಲ್ಲಿ ದಾವ ಆಸ್ತಿಯನ್ನು ದಾನ ಕೊಡುವ ಆಸಕ್ತಿಯನ್ನು ನನ್ನ ತಾಯಿ ಹೊಂದಿರಲಿಲ್ಲ. ಈ ದಾವೆಯನ್ನು ದಾಖಲಿಸಿದ

ನಂತರ ಈಗ್ಗೆ ಸುಮಾರು 3 ವರ್ಷದ ಹಿಂದೆ ನಾನು ವಾದಿಗೆ ಭೇಟಿಯಾಗಿ ದಾವೆಯನ್ನು ರಾಜಿ ಮಾಡಿಕೊಳ್ಳುವ ಬಗ್ಗೆ ಕೇಳಿದ್ದೆ. ಆ ಸಮಯದಲ್ಲಿ ನನ್ನ ತಾಯಿ ಜೀವಂತ ಇರಲಿಲ್ಲ. ಆ ಸಮಯದಲ್ಲಿ ಈ ದಾವೆ ರಾಜಿಯಾಗಿ ನನಗೆ ಇಬ್ಬರು ಸಹೋದರರು ತಲಾ 3 ಲಕ್ಷ ಹಣ ಕೊಟ್ಟು ಎರಡು ಮಳಿಗೆಗಳನ್ನು ಒಬ್ಬಬ್ಬರೂ ಒಂದೊಂದು ತೆಗೆದುಕೊಳ್ಳಬೇಕೆಂದು ಮಾತಾಯಿತು. ಆ ಮೇಲೆ ಏನಾಯಿತೋ ಗೊತ್ತಿಲ್ಲ ಮೃತ 2 ನೇ ಪ್ರತಿವಾದಿ ಒಪ್ಪಿ ಕೊಳ್ಳಲಿಲ್ಲ. ರಾಜಿ ಆಗುವ ಸಮಯದಲ್ಲಿ ಪ್ರತಿವಾದಿ 3 ಮತ್ತು 4 ಕೂಡ ಇದ್ದು ಅವರು ಸಹ ಒಪ್ಪಿದ್ದರು.

***ಪಾಟೀ ಸವಾಲುಃ***

ಮೃತ ಪ್ರತಿವಾದಿ ನಂಬರ 2 ಪರ ವಾರಸುದಾರರ ಹಾಗೂ ಪ್ರತಿವಾದಿ ನಂಬರ 3, 4, 8 ಮತ್ತು 9 ಪರ ವಕೀಲರು ಪಾಟೀ ಸವಾಲಿಗೆ ಸಮಾಯಾವಕಾಶ ಕೋರಿದ್ದು, ಪ್ರಕರಣ 2013 ರ ಪ್ರಕರಣವಾಗಿದ್ದು ಹಾಗೂ ಸಾಕ್ಷಿದಾರರು ವಯಸ್ಸಾದ ಮತ್ತು ಆಂಧ್ರಪ್ರದೇಶದಿಂದ ಬಂದಿರುವುದರಿಂದ ವಕೀಲರ ವಿನಂತಿಯನ್ನು ತಳ್ಳಿಹಾಕಿ ಪಾಟೀ ಸವಾಲುನ್ನು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೆಯ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿ ಕೊಂಡಿರುತ್ತಾರೆ.)**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ರಾಯಚೂರು.**